# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ವಿಶ್ವಾವಸು ನಾಮ ಸಂವತ್ಸರ
ಪುಟ : ೪ ಸಂಪುಟ : ೭೨ ಸಂಚಿಕೆ : ೦೧

**15-01-2026 ಪುಷ್ಯ ಮಾಸ : ಕೃಷ್ಣ ಪಕ್ಷ ಗುರುವಾರ**

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಗಳವರು, ಶ್ರೀಕ್ಷೇತ್ರ ಹೊಂಬುಜ



ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ
ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಶ್ರೀಕ್ಷೇತ್ರ ಹೊಂಬುಜ


## ಶುಭಾಶೀರ್ವಚನ

## "ಸಾನಿಧ್ಯ ಲಾಭ"

ಸಹೃದಯರೇ,

ಮನುಷ್ಯ ಜೀವನದಲ್ಲಿ ಪರಸ್ಪರ ವಿಶ್ವಾಸ, ಸತ್ಯನಿಷ್ಠೆಯಿಂದ ನಡೆದಾಗಲೇ ಬದುಕು ಸಾರ್ಥಕವಾಗುತ್ತದೆ. ಬಡವ, ಶ್ರೀಮಂತ ಭೇದವಿಲ್ಲದೆ ನಂಬಿಕೆಯೆನ್ನುವುದು ಬಾಂಧವ್ಯದ ಅಡಿಪಾಯವಾಗಿರುತ್ತದೆ. ಅನಾದಿ ಕಾಲದಿಂದಲೂ ಈ ಸಂಸಾರವು ಸತ್ಯನಿಷ್ಠೆ, ನಂಬಿಕೆಗಳಂತ ಆದರ್ಶ ನೀತಿಗಳಿಂದಲೇ ನಡೆದು ಬಂದಿರುತ್ತದೆ. ಸಜ್ಜನರ ಸಂಗತಿಯಿಂದ ಇಂತಹ ನಡತೆಯು ಸಾಮಾನ್ಯರಲ್ಲೂ ಸುಧಾರಣೆ ತರುತ್ತದೆ.

ಯಥಾ ಸನ್ನಿಧಿಮಾತ್ರೇಣ। ಚಂದನಂ ವಾಸಯೇದ್ ವನಮ್।
ತಥಾ ಸತ್ಪುರುಷ ಸಂಗೇನ। ನರೋ ಧರ್ಮೇ ಪ್ರತಿಷ್ಠಿತಃ॥

ಹೇಗೆ ಶ್ರೀಗಂಧ'ದ ಮರವು ಕಾಡಿನಲ್ಲಿರುವುದರಿಂದ ಇಡೀ ಕಾಡು ಸುಗಂಧಿತವಾಗುತ್ತದೆಯೋ, ಹಾಗೆಯೇ ಸಜ್ಜನರ ಸಹವಾಸದಿಂದ ಸಾಮಾನ್ಯ ಮನುಷ್ಯನು ಧರ್ಮನಿಷ್ಠನಾಗುತ್ತಾನೆ.

ಒಂದು ನಗರದಲ್ಲಿ ಒಬ್ಬ ಬಡ ಬ್ರಾಹ್ಮಣನಿದ್ದನು. ದಿನವಿಡೀ ಆ ಬ್ರಾಹ್ಮಣನು ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ, ಅಲ್ಲಿಂದ ಇನ್ನೊಂದು ಹಳ್ಳಿಗೆ ಭಿಕ್ಷೆಗಾಗಿ ಹೋಗುತ್ತಿದ್ದನು. ಭಿಕ್ಷೆಯಲ್ಲಿ ದೊರೆಯುತ್ತಿದ್ದ ಧಾನ್ಯ ಮತ್ತು ಹಣದಲ್ಲಿ ಒಂದು ಭಾಗವನ್ನು ತನ್ನ ಉಪಯೋಗಕ್ಕೆ ಇಟ್ಟುಕೊಂಡು, ಉಳಿದ ಹಣವನ್ನು ನಗರದ ಒಬ್ಬ ಸೇಠನ ಬಳಿ ಜಮಾ ಮಾಡುತ್ತಿದ್ದನು.

WWW.HOMBUJAPADMAVATI.ORG

ಕೆಲವು ದಿನಗಳ ನಂತರ ಬ್ರಾಹ್ಮಣನ ಮಗಳ ಮದುವೆಯ ಸಮಯ ಬಂತು. ಅದಕ್ಕಾಗಿ ಹಣದ ಅಗತ್ಯವಾಯಿತು. ಆಗ ಬ್ರಾಹ್ಮಣನು ಸೇಠನ ಬಳಿಗೆ ಹೋಗಿ ತನ್ನ ಹಣವನ್ನು ಕೇಳಿದನು. ಆದರೆ ಸೇಠನ ಮನಸ್ಸಿನಲ್ಲಿ ಅಪ್ರಾಮಾಣಿಕತೆ ಹುಟ್ಟಿತು. "ಈ ಬ್ರಾಹ್ಮಣನು ಏನು ಮಾಡಬಲ್ಲ?" ಎಂದು ಯೋಚಿಸಿ, ಸೇಠನು ಹಣ ಕೊಡಲು ನಿರಾಕರಿಸಿದನು. ಬ್ರಾಹ್ಮಣನು ಎಷ್ಟೇ ವಿನಂತಿಸಿಕೊಂಡರೂ ಕರುಣೆಯಿಲ್ಲದ ಸೇಠನು ಒಪ್ಪಲಿಲ್ಲ. ತನ್ನ ದುಃಖವನ್ನು ಹೊತ್ತುಕೊಂಡು ಬ್ರಾಹ್ಮಣನು ಆ ನಗರದ ರಾಜ ಚಿತ್ರಸೇನನ ಬಳಿಗೆ ಹೋಗಿ ತನ್ನ ಸಮಸ್ಯೆಯನ್ನು ವಿವರಿಸಿದನು. ರಾಜನು ಕೇಳಿದನು "ಎಲೈ ಬ್ರಾಹ್ಮಣನೇ, ಸೇಠನು ನಿಮ್ಮ ಹಣವನ್ನು ತೆಗೆದುಕೊಂಡಿದ್ದಾನೆ ಎಂಬುದಕ್ಕೆ ನಿಮ್ಮ ಬಳಿ ಯಾವುದಾದರು ಸಾಕ್ಷ್ಯವಿದೆಯೆ?" ಅದಕ್ಕೆ ಬ್ರಾಹ್ಮಣನು ಉತ್ತರಿಸಿದನು "ಮಹಾರಾಜ, ನನ್ನ ಬಳಿ ಯಾವುದೇ ಸಾಕ್ಷ್ಯವಿಲ್ಲ. ಆದರೆ ಸೇಠನ ಬಳಿ ನನ್ನ 100 ಚಿನ್ನದ ನಾಣ್ಯಗಳಿವೆ ಎಂಬುದು ಸತ್ಯ" ಎಂದನು. ರಾಜನು ಹೇಳಿದನು "ನಾನು ನಿನ್ನ ಮಾತನ್ನು ನಂಬುತ್ತೇನೆ. ಆದರೆ ಸೇಠನು ನಿರಾಕರಿಸಿದರೆ ಏನು ಮಾಡಬೇಕು?" ಅದಕ್ಕೆ ಬ್ರಾಹ್ಮಣನು "ಮಹಾರಾಜ, ನೀವು ರಾಜರು. ನಾನು ನಿಮ್ಮ ಪ್ರಜೆ. ನನಗೆ ನ್ಯಾಯ ಕೊಡಿಸುವುದು ನಿಮ್ಮ ಕರ್ತವ್ಯ." ಬ್ರಾಹ್ಮಣನ ಮಾತು ಕೇಳಿ ರಾಜನು ಗಂಭೀರ ಚಿಂತನೆಗೆ ಒಳಗಾದನು. ಸ್ವಲ್ಪ ಹೊತ್ತಿನ ನಂತರ ಹೇಳಿದರು "ಬ್ರಾಹ್ಮಣ ದೇವತೆ, ನನ್ನ ಬಳಿ ಒಂದು ಯುಕ್ತಿಯಿದೆ." ಬ್ರಾಹ್ಮಣ "ಯಾವ ಯುಕ್ತಿ ಮಹಾರಾಜ?" ರಾಜ "ನಾಳೆ ಮಧ್ಯಾಹ್ನ ನನ್ನ ಸವಾರಿ ನಗರದಲ್ಲಿ ಸಂಚರಿಸುವಾಗ, ನೀನು ಸೇಠನ ಅಂಗಡಿಯ ಮುಂದೆ ನಿಂತಿರಬೇಕು. ಉಳಿದುದನ್ನು ನಾನು ನೋಡಿಕೊಳ್ಳುತ್ತೇನೆ."

ಮರುದಿನ ನಿಗದಿತ ಸಮಯಕ್ಕೆ ಬ್ರಾಹ್ಮಣನು ಸೇಠನ ಅಂಗಡಿಯ ಮುಂದೆ ನಿಂತನು. ಸ್ವಲ್ಪ ಸಮಯದಲ್ಲೇ ರಾಜನ ಸವಾರಿ ಅಲ್ಲಿಗೆ ಬಂತು. ರಾಜನು ಸೇಠನ ಅಂಗಡಿಯ ಮುಂದೆ ನಿಂತಿದ್ದ ಬ್ರಾಹ್ಮಣನನ್ನು ನೋಡಿ ಅತ್ಯಂತ ಹರ್ಷದಿಂದ ಹೇಳಿದರು "ಅರೆ ಬ್ರಾಹ್ಮಣ ದೇವತೆ! ನೀವು ಹೇಗಿದ್ದೀರಿ? ಬಹಳ ದಿನಗಳಾದವು. ಬನ್ನಿ, ಬನ್ನಿ, ನನ್ನ ಜೊತೆಗೆ ಕುಳಿತುಕೊಳ್ಳಿ. ಎಲ್ಲವೂ ಸುಖವಾಗಿದೆಯೆ?" ಬ್ರಾಹ್ಮಣನು ಉತ್ತರಿಸಿದನು "ನಿಮ್ಮ ಕೃಪೆಯಿಂದ ಮಹಾರಾಜ, ಎಲ್ಲವೂ ಚೆನ್ನಾಗಿವೆ." ಈ ದೃಶ್ಯವನ್ನು ಕಂಡ ಸೇಠನು ಬೆವರುತ್ತಾ ನಿಂತನು. "ಇವನಿಂದ ರಾಜನಿಗೆ ದೂರು ಹೋಗಿಬಿಟ್ಟರೆ ನನಗೆ ದೊಡ್ಡ ತೊಂದರೆ ಆಗುತ್ತದೆ" ಎಂದು ಯೋಚಿಸಿ, ತಕ್ಷಣವೇ ತನ್ನ ಒಬ್ಬ ಸೇವಕನಿಗೆ 200 ಚಿನ್ನದ ನಾಣ್ಯಗಳನ್ನು ನೀಡಿ, "ಈ ನಾಣ್ಯಗಳನ್ನು ಬ್ರಾಹ್ಮಣ ದೇವತರಿಗೆ ಕೊಟ್ಟುಬಿಡು. ನಾವು ಅವರ ಮಗಳ ಮದುವೆಗೆ ಖಂಡಿತ ಬರುತ್ತೇವೆ ಎಂದು ಹೇಳು" ಎಂದನು. ಸ್ವಲ್ಪ ಸಮಯದ ನಂತರ ಬ್ರಾಹ್ಮಣನು ರಾಜನ ಸವಾರಿಯಿಂದ ಇಳಿದು ತನ್ನ ದಾರಿಗೆ ಹೊರಟನು. ಎದುರಿನಿಂದ ಸೇಠನ ಸೇವಕ 200 ನಾಣ್ಯಗಳ ಚೀಲದೊಂದಿಗೆ ಬಂದು, ಅವುಗಳನ್ನು ಬ್ರಾಹ್ಮಣನ ಕೈಗೆ ನೀಡಿ, "ಇದು ಕಡಿಮೆ ಅನ್ನಿಸಿದರೆ ಹೇಳಿ, ಸೇಠನು ಇನ್ನೂ ಕೊಡುತ್ತಾರೆ. ಸೇಠನು ನಿಮ್ಮ ಮಗಳ ಮದುವೆಗೆ ಖಂಡಿತ ಬರುತ್ತಾರೆ" ಎಂದನು. ಬ್ರಾಹ್ಮಣನು ರಾಜನಿಗೆ ಕೃತಜ್ಞತೆ ಸಲ್ಲಿಸಿ ಸಂತೋಷದಿಂದ ಮನೆಗೆ ಹೋಗಿ, ವೈಭವದಿಂದ ತನ್ನ ಮಗಳ ಮದುವೆಯನ್ನು ನಡೆಸಿದನು.

ಜೀವನದಲ್ಲಿ ಸದಾ ಒಳ್ಳೆಯವರ ಮತ್ತು ಮಹಾನ್ ವ್ಯಕ್ತಿಗಳ ಸಂಗವನ್ನು ಮಾಡಬೇಕು. ಅವರ ಸಾನ್ನಿಧ್ಯದಿಂದ ನಮ್ಮ ವ್ಯಕ್ತಿತ್ವವೂ ಉನ್ನತವಾಗುತ್ತದೆ. ಈ ಕಥೆಯಲ್ಲಿ ರಾಜನ ಸಾನ್ನಿಧ್ಯದಿಂದ ಬ್ರಾಹ್ಮಣನು ಲಾಭ ಪಡೆದಂತೆಯೇ, ಉತ್ತಮ ಸಂಗದಿಂದ ನಮಗೂ ಲಾಭವಾಗುತ್ತದೆ. ಇದನ್ನೇ "ಸಾನ್ನಿಧ್ಯದ ಲಾಭ" ಎಂದು ಕರೆಯುತ್ತಾರೆ.

## ಮಕರ ಸಂಕ್ರಾಂತಿ ಪರ್ವಾಚರಣೆ : ಪ್ರಕೃತಿ ಮಾತೆಯ ಆರಾಧನೆ

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



ಕುಂದಾದ್ರಿ (ಜ. 14) : "ಭಾರತೀಯ ಧರ್ಮ ಪರಂಪರೆ ಮತ್ತು ಸಂಸ್ಕೃತಿಯಲ್ಲಿ ಮಕರ ಸಂಕ್ರಮಣ ಪರ್ವಾಚರಣೆಯು ನವವರ್ಷಾರಂಭದ ಸಂಕೇತವೂ ಆಗಿದೆ. ಸೂರ್ಯನ ಪ್ರಖರ ಕಿರಣಗಳು ಭೂ ಮಂಡಲದ ಪ್ರಕೃತಿ-ಹೊಲ-ತೋಟಗಳಿಗೆ ಬೆಳೆಗಳು ಸಮೃದ್ಧವಾಗಿ ಬೆಳೆಯಲು ಮಕರ ಸಂಕ್ರಾಂತಿಯ ನಂತರದ ಉತ್ತರಾಯಣ ಕಾಲವು ಪೂರಕವಾಗಿದೆ ಎಂಬುದನ್ನು ಪ್ರಸಕ್ತ ಯುವ ಪೀಳಿಗೆಯವರು ಅರಿತುಕೊಳ್ಳಬೇಕು" ಎಂದು ಹೊಂಬುಜ ಶ್ರೀಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಕುಂದಾದ್ರಿ ಶ್ರೀ 1008 ಪಾರ್ಶ್ವನಾಥ ಸ್ವಾಮಿ ಶ್ರೀ ಪದ್ಮಾವತಿ ದೇವಿ ಹಾಗೂ ಆಚಾರ್ಯ ಶ್ರೀ ಕುಂದಕುಂದಾಚಾರ್ಯರ ಪಾದ-ಚರಣಗಳ ಸಾನಿಧ್ಯದಲ್ಲಿ ಭಕ್ತಿಪೂರ್ವಕ ಪೂಜೆ ಸಲ್ಲಿಸಿ ಅನುಗ್ರಹ ಪ್ರವಚನದಲ್ಲಿ ತಿಳಿಸಿದರು.

ಶ್ರೀಕ್ಷೇತ್ರ ಕುಂದಾದ್ರಿಯ ಪರಿಸರವು ಜೀವವೈವಿಧ್ಯತೆಯ ಪ್ರಮುಖ ಕೇಂದ್ರವಾಗಿದ್ದು, ಔಷಧೀಯ ಸಸ್ಯ ಜೀವಿಗಳ ಸಂರಕ್ಷಣೆ-ಸಂಶೋಧನೆಗಳು ನಡೆಯುತ್ತಿದೆ ಎಂದು ಸ್ವಸ್ತಿಶ್ರೀಗಳವರು ಆಚಾರ್ಯ ಶ್ರೀ ಕುಂದಕುಂದರವರ ಧ್ಯಾನ, ಅಧ್ಯಯನ ಹಾಗೂ ಗಿಡಮೂಲಿಕೆಗಳಿಂದ ಅಮೂಲ್ಯ ಔಷಧಗಳನ್ನು ಸಿದ್ಧಪಡಿಸಿದ ಕುರಿತು ತಿಳಿಸಿದರು. ಶ್ರೀ ಕಲಿಕುಂಡ ಯಂತ್ರಾರಾಧನೆ ಏರ್ಪಡಿಸಲಾಗಿತ್ತು. ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಉಡುಪಿ, ಮಂಗಳೂರು, ವಿಜಯಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಭಕ್ತರು ಆಗಮಿಸಿದ್ದರು.

2ನೇ ಪುಟಕ್ಕೆ

## ಶ್ರೀ ಹೊಂಬುಜ ಕ್ಷೇತ್ರದಲ್ಲಿ ವಾರ್ಷಿಕ ರಥಯಾತ್ರಾ ಮಹೋತ್ಸವ-2026



ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರದಲ್ಲಿ ಪರಂಪರಾನುಗತವಾಗಿ ನಡೆದು ಬಂದಿರುವ ಭಗವಾನ್ ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರ ವಾರ್ಷಿಕ ರಥೋತ್ಸವವು ಮಾರ್ಚ್ 09 ರಿಂದ ಮಾರ್ಚ್ 14ರವರೆಗೆ ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಜರುಗಲಿವೆ. ಪರಾಭವ ನಾಮ ಸಂವತ್ಸರದ ಪಾಲ್ಗುಣಮಾಸ ಕೃಷ್ಣಪಕ್ಷ ಷಷ್ಠಿಯಿಂದ ದಶಮಿಯವರೆಗೆ ನೆರವೇರಲಿದೆ. ಮಾರ್ಚ್ 06 ರಿಂದ 08ರವರೆಗೆ ಕ್ಷೇತ್ರದ ವಿವಿಧ ಬಸದಿಗಳಲ್ಲಿ ವಿಶೇಷ ಆರಾಧನೆಗಳು ಜರುಗಲಿವೆ. ಮಾರ್ಚ್-09 ಧ್ವಜಾರೋಹಣ, ನಾಗವಾಹನೋತ್ಸವ, ಮಾ. 10-ಸಿಂಹವಾಹನೋತ್ಸವ, ಮಾ. 11 ಬೆಳ್ಳಿ-ಪುಷ್ಪರಥೋತ್ಸವ, ಮಾ. 12ರ ಮೂಲಾನಕ್ಷತ್ರದಂದು ಮಹಾರಥೋತ್ಸವ, ಮಾ. 13ರಂದು ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿಗೆ 108 ಕಲಶಗಳ ಮಹಾಭಿಷೇಕ ಮತ್ತು ಸಂಘಪೂಜೆ, ಮಾ. 14ರಂದು ಕುಂಕುಮೋತ್ಸವ ಮತ್ತು ಧ್ವಜಾವರೋಹಣದೊಂದಿಗೆ ಸಂಪನ್ನಗೊಳ್ಳಲಿದೆ. ಮಾ. 11ರಂದು ಧಾರ್ಮಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ದಿವ್ಯ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ನಡೆಯುವ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹಾಗೂ ವಾರ್ಷಿಕ ರಥಯಾತ್ರಾ ಮಹೋತ್ಸವದಲ್ಲಿ ಧರ್ಮ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುಣ್ಯಭಾಗಿಗಳಾಗಬೇಕಾಗಿ ಅಪೇಕ್ಷೆ.

ಆಡಳಿತಾಧಿಕಾರಿಗಳು. ಶ್ರೀ ಹೊಂಬುಜ ಜೈನ ಮಠ.

ದೂ. 08185-262722, ಮೊ: ಸೇವೆ: 9481453653, ವಸತಿ: 9483801460

## ಕುಂದಾದ್ರಿ ವಾರ್ಷಿಕ ಜಾತ್ರೋತ್ಸವ-ಆಚಾರ್ಯ ಕುಂದಕುಂದಾಚಾರ್ಯರ ಸ್ಮರಣೆ

1ನೇ ಪುಟದಿಂದ

ಶ್ರೀ ಪಾರ್ಶ್ವನಾಥ ಸ್ವಾಮಿ ಜನ್ಮಾಭಿಷೇಕ-ನಾಮಕರಣ-ತಪಃಕಲ್ಯಾಣಗಳ ಸುದಿನ ಪ್ರಯುಕ್ತ ವಿಶೇಷ ಪೂಜಾ ವಿಧಿಗಳು ನೆರವೇರಿಸಲಾಯಿತು. ಜಯಶ್ರೀ ಹೊರನಾಡು ಅವರಿಂದ ಜಿನಭಕ್ತಿಗೀತೆ, ಜಿನಸ್ತೋತ್ರ ಸಂಗೀತದ ಹಿನ್ನೆಲೆಯ ಗಾಯನವು ಭಕ್ತವೃಂದದವರಿಗೆ ಮುದನೀಡಿತು. ಹೊಂಬುಜ ಮಹಿಳಾ ಸಮಾಜದವರಿಂದ ಹಾಗೂ ಮಕ್ಕಿಮನೆ ಸುದೇಶ ತಂಡದವರಿಂದ ಜಿನಭಜನೆ ಕಾರ್ಯಕ್ರಮ ನೆರವೇರಿತು.

ಶೃಂಗೇರಿಯ ಡಾ. ನಿರಂಜನ ಕುಮಾರ್, ಕಾರ್ಕಳ ಜೈನ ಮಿಲನ್, ಮಾಜಿ ಸಚಿವ ಕಿಮ್ಮನೆ ರತ್ನಾಕರ, ತೀರ್ಥಹಳ್ಳಿ ವೈದ್ಯರಾದ ಡಾ. ಜೀವಂಧರ ಜೈನ್, ರತ್ನಕುಮಾರ್, ಯಶೋಧರ ಹೆಗ್ಡೆ, ಸಹಾಯಕ ಅರಣ್ಯಸಂರಕ್ಷಣಾಧಿಕಾರಿ ಮಧುಸೂದನ್ ಇನ್ನಿತರರು ಇನ್ನಿತರರು ಉಪಸ್ಥಿತರಿದ್ದರು. ಶ್ರೀಗಳವರು ಸರ್ವರಿಗೂ ಫಲ ಮಂತ್ರಾಕ್ಷಣೆ ನೀಡಿ ಹರಸಿದರು. ಪುರೋಹಿತ ಶಾಂತಿರಾಜ ಇಂದ್ರರು, ಸಹಪುರೋಹಿತರು ಪೂಜಾ ವಿಧಿ-ವಿಧಾನಗಳನ್ನು ನೆರವೇರಿಸಿದರು.

ಆಡಳಿತಾಧಿಕಾರಿ ಸಿ.ಡಿ. ಅಶೋಕ ಕುಮಾರ್ ಹಾಗೂ ಹೊಂಬುಜ ಶ್ರೀ ಜೈನ ಮಠದ ಸೇವಾಕಾಂಕ್ಷಿ ಸೇವಕರು ಅಚ್ಚುಕಟ್ಟಿನಿಂದ ರಾತ್ರಿಯಲ್ಲಿ ದೀಪೋತ್ಸವ ನೆರವೇರಿಸಿದರು. ಅನ್ನಪ್ರಸಾದ ವ್ಯವಸ್ಥೆ ಅಚ್ಚುಕಟ್ಟಿನಿಂದ ಮಾಡಲಾಗಿತ್ತು.

## ವಿಶೇಷ ಆರಾಧನೆ



**ಹೊಂಬುಜ (ಡಿ.28) :** ಅತಿಶಯ ಶ್ರೀಕ್ಷೇತ್ರ ಹೊಂಬುಜ ಭಗವಾನ 1008 ಪಾರ್ಶ್ವನಾಥ ತೀರ್ಥಂಕರರ ಜಿನಮಂದಿರದಲ್ಲಿ ಕಲಿಕುಂಡ ಯಂತ್ರಾರಾಧನೆಯು ಚಾರಿತ್ರ್ಯ ಚಕ್ರವರ್ತಿ ಪ್ರಥಮಾಚಾರ್ಯ ಶ್ರೀ ಶಾಂತಿಸಾಗರಜೀ ಮುನಿರಾಜ್‌ರವರ ಸಪ್ತಮ ಪಟ್ಟಾಧೀಶ ಆಚಾರ್ಯ 108 ಶ್ರೀ ಅನೇಕಾಂತ ಸಾಗರಜೀ ಮುನಿರಾಜ ಸಸಂಘದ ಸಾನಿಧ್ಯದಲ್ಲಿ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ ಉಪಸ್ಥಿತಿಯಲ್ಲಿ ನೆರವೇರಿತು. ಮುನಿಶ್ರೀಗಳವರ ಸಂಘದವರು ಪೂಜಾ ವಿಧಿ-ವಿಧಾನದಲ್ಲಿ ಪಾಲ್ಗೊಂಡರು.

WWW.HOMBUJAPADMAVATI.ORG

## ಡಾ॥ ಜೀವಂಧರ ಜೈನ್‌ರವರಿಗೆ ರಾಷ್ಟ್ರಮಟ್ಟದ 'ಆಯುರ್ವೇದ ವಿಶ್ವ ವೈದ್ಯರತ್ನ' ಪ್ರಶಸ್ತಿ



**ತೀರ್ಥಹಳ್ಳಿ :** ಇಲ್ಲಿಯ ಸುಪ್ರಸಿದ್ಧ ಆರ್ಯುರ್ವೇದ ವೈದ್ಯರಾದ ಡಾ॥ ಜೀವಂಧರ ಜೈನರವರಿಗೆ "ಆಯುರ್ವೇದ ವಿಶ್ವ ವೈದ್ಯರತ್ನ" ಪ್ರಶಸ್ತಿಯು ಬೆಂಗಳೂರಿನ ಅರಮನೆ ಮೈದಾನದಲ್ಲಿ 4 ದಿನಗಳ ಕಾಲ ಜರುಗಿದ ರಾಷ್ಟ್ರಮಟ್ಟದ 2ನೇ ವಿಶ್ವಮಹಾಸಮ್ಮೇಳನದಲ್ಲಿ ತೀರ್ಥಹಳ್ಳಿಯಲ್ಲಿ ತಮ್ಮ 'ಶ್ರೀ ಪೂಜ್ಯಪಾದ ಚಿಕಿತ್ಸಾಲಯ'ದ ಮುಖಾಂತರ 50 ವರುಷಗಳಿಂದ ಅವಿರತವಾಗಿ ಸಾರ್ಥಕ ವೈದ್ಯಕೀಯ ಸೇವೆಯನ್ನು ಗೈಯುತ್ತಿರುವುದನ್ನು ಪರಿಗಣಿಸಿ ಪ್ರತಿಷ್ಠಿತ "ವಿಶ್ವವೈದ್ಯರತ್ನ" ಎಂಬ ಪ್ರಶಸ್ತಿಯನ್ನು ಸಾಧು ಸಂತರು, ಹಿರಿಯ ವೈದ್ಯರು ಹಾಗೂ ಗಣ್ಯಾತಿಗಣ್ಯರ ಸಮ್ಮುಖದಲ್ಲಿ ಪ್ರದಾನ ಮಾಡಲಾಯಿತು.

## ಶ್ರೀ ಮಲ್ಲಿನಾಥ ಇಂದ್ರರಿಗೆ 'ವಜ್ರಶ್ರೀ ಅರ್ಚಕ ಪುರಸ್ಕಾರ' ಪ್ರದಾನ



**ಮೂಡಬಿದಿರೆ :** ಜೈನ ಮಿಲನ್‌ನ ಮಾಸಿಕ ಸಭೆಯಲ್ಲಿ ಇತ್ತೀಚೆಗೆ ಮೂಡಬಿದ್ರಿ ಜೈನ ಪಾಠಶಾಲಾ ಬಸದಿಯ ಅರ್ಚಕ ಶ್ರೀ ಮಲ್ಲಿನಾಥ ಇಂದ್ರರಿಗೆ ತನ್ನ ಪತ್ನಿ ಶ್ರೀಮತಿ ಕನಕಮಂಜರಿಯೊಂದಿಗೆ ಪ್ರತಿ ವರ್ಷ ದಕ್ಷ, ನಿಷ್ಠಾವಂತ ಅರ್ಚಕರನ್ನು ಗುರುತಿಸಿ ಶ್ರೀಪಾಲ್ ಎಸ್. ಇವರ ಸಹಧರ್ಮಿಣಿ ವಜ್ರಮ್ಮ ಮತ್ತು ಮಾತೃಶ್ರೀ ರಾಜಮತಿಯವರ ಸ್ಮರಣೆಯೊಂದಿಗೆ ನೀಡುತ್ತಿರುವ 'ವಜ್ರಶ್ರೀ ಅರ್ಚಕ ಪುರಸ್ಕಾರ'ವನ್ನು ಶಾಲು, ಹಾರ, ಪ್ರಶಸ್ತಿ ಪತ್ರ, ನಗದು ಪುರಸ್ಕಾರವನ್ನು ಮಿಲನ್ ಅಧ್ಯಕ್ಷ ಮಹೇಂದ್ರ ಜೈನ್, ಮುಖ್ಯ ಅತಿಥಿಗಳಾದ ಶ್ರೀ ಅಜಿತ್ ಕುಮಾರ್ ಕೊಕ್ರಾಡಿ, ಶ್ವೇತಾ ಜೈನ್ ಮತ್ತು ಜಯರಾಜ್ ಕಂಬಳಿ, ಶಶಿಕಾಂತ ಎಳನೀರು, ಶ್ರೇಯಾಂಸ ಹೆಗ್ಡೆ ಮತ್ತು ಸಂಪತ್ ಸಾಮ್ರಾಜ್ಯ ಶಿರ್ತಾಡಿ ಮತ್ತು ಪ್ರಶಸ್ತಿಯ ದಾತೃ ಶ್ರೀಪಾಲ್ ಎಸ್. ಇವರ ಉಪಸ್ಥಿತಿಯಲ್ಲಿ ಪುರಸ್ಕಾರ ನೀಡಿ ಗೌರವಿಸಲಾಯಿತು.



**ಜಿನ-ದನಿ**

**ಜ್ಞಾನಂ ಪೂಜ್ಯಂ ತಪೋಹೀನಂ ಜ್ಞಾನಹೀನಂ ತಪೋಹಿತಮ್ ।**
**ಯತ್ತದ್ವಯಂ ಸ ದೇವಃ ಸ್ಯಾದ್ವಿಹೀನೋ ಗಣಪೂರಣಃ ॥** (ಸಂಗ್ರಹ)

ಅರ್ಥ : ಯಾರಲ್ಲಿ ತಪಸ್ಸು ಕಡಿಮೆಯಿದ್ದು, ಜ್ಞಾನವು ಅಧಿಕವಿದ್ದರೆ, ಆತ ಕೂಡ ಪೂಜ್ಯವೇ ಹಾಗೂ ಜ್ಞಾನ ಕಡಿಮೆಯಿದ್ದು, ತಪಸ್ಸು ಕಡಿಮೆಯಿದ್ದಲ್ಲಿ ಆಗಲೂ ಕೂಡ ಪೂಜ್ಯನೇ. ಒಂದು ವೇಳೆ ಜ್ಞಾನ ಮತ್ತು ತಪಸ್ಸುಗಳೆರಡು ಇದ್ದಲ್ಲಿ ಪರಮಪೂಜ್ಯನೆನಿಸಿಕೊಳ್ಳುತ್ತಾನೆ. ಆದರೆ ಜ್ಞಾನ ಮತ್ತು ತಪಸ್ಸುಗಳೆರಡು ಇಲ್ಲವಾದಲ್ಲಿ ಕೇವಲ ಲೆಕ್ಕಕ್ಕೆ ಮಾತ್ರ ಗುರುತಿಸಿಕೊಳ್ಳುವುದು.

## ಬರಲಿರುವ ಪರ್ವದಿನಗಳು

ವಿಶ್ವಾವಸುನಾಮ ಸಂವತ್ಸರದ

**ಪುಷ್ಯಮಾಸ ಕೃಷ್ಣಪಕ್ಷ ತ್ರಯೋದಶಿಯಿಂದ ಫಾಲ್ಗುಣಮಾಸ ಕೃಷ್ಣಪಕ್ಷ ಅಮವಾಸ್ಯೆಯವರೆಗೆ**

| | |
|---|---|
| **ಪುಷ್ಯ ಮಾಸ** | **ಫೆ. 03 ಮಂಗಳ-ಬಿದಿಗೆ-ಮಘಾ, ವರಂಗ ಕ್ಷೇತ್ರದಲ್ಲಿ ಧ್ವಜಾರೋಹಣ** |
| ಜ. 16 ಶುಕ್ರ-ತ್ರಯೋದಶಿ-ಜ್ಯೇಷ್ಠಾ | ಫೆ. 04 ಬುಧ-ತದಿಗೆ-ಪೂರ್ವಾ |
| ಜ. 17 ಶನಿ-ಚತುರ್ದಶಿ-ಮೂಲಾ | **ಫೆ. 05 ಗುರು-ಚತುರ್ಥಿ-ಉತ್ತರಾ, ವರಂಗ ಕ್ಷೇತ್ರದಲ್ಲಿ ಪುಷ್ಪರಥೋತ್ಸವ** |
| ಜ. 18 ಭಾನು-ಅಮವಾಸ್ಯೆ-ಪೂ.ಷಾಢ | **ಫೆ. 06 ಶುಕ್ರ-ಪಂಚಮಿ-ಹಸ್ತ, ವರಂಗ ಕ್ಷೇತ್ರದಲ್ಲಿ ಮಹಾರಥೋತ್ಸವ** |
| **ಮಾಘ ಮಾಸ** | **ಫೆ. 07 ಶನಿ-ಷಷ್ಠಿ-ಚಿತ್ತಾ, ವರಂಗ ಕ್ಷೇತ್ರದಲ್ಲಿ ಕ್ಷೇತ್ರಪಾಲ ವಿಶೇಷ ಪೂಜೆ, ಧ್ವಜಾವರೋಹಣ** |
| ಜ. 19 ಸೋಮ-ಪ್ರತಿಪದ-ಉ.ಷಾಢ | ಫೆ. 08 ಭಾನು-ಸಪ್ತಮಿ-ಸ್ವಾತಿ |
| ಜ. 20 ಮಂಗಳ-ಬಿದಿಗೆ-ಶ್ರವಣ | ಫೆ. 09 ಸೋಮ-ಅಷ್ಟಮಿ-ವಿಶಾಖ |
| ಜ. 21 ಬುಧ-ತದಿಗೆ-ಧನಿಷ್ಠ | ಫೆ. 10 ಮಂಗಳ-ಅಷ್ಟಮಿ-ವಿಶಾಖ |
| ಜ. 22 ಗುರು-ಚತುರ್ಥಿ-ಶತಭಿಷಾ | ಫೆ. 11 ಬುಧ-ನವಮಿ-ಅನುರಾಧ |
| ಜ. 23 ಶುಕ್ರ-ಪಂಚಮಿ-ಪೂ.ಭಾದ್ರ | ಫೆ. 12 ಗುರು-ದಶಮಿ-ಜ್ಯೇಷ್ಠಾ |
| ಜ. 24 ಶನಿ-ಷಷ್ಠಿ-ಉ.ಭಾದ್ರ | ಫೆ. 13 ಶುಕ್ರ-ಏಕಾದಶಿ-ಮೂಲ |
| ಜ. 25 ಭಾನು-ಸಪ್ತಮಿ-ರೇವತಿ | ಫೆ. 14 ಶನಿ-ದ್ವಾದಶಿ-ಪೂ.ಷಾಢ |
| ಜ. 26 ಸೋಮ-ಅಷ್ಟಮಿ-ಅಶ್ವಿನಿ | ಫೆ. 15 ಭಾನು-ತ್ರಯೋದಶಿ-ಉ.ಷಾಢ |
| ಜ. 27 ಮಂಗಳ-ನವಮಿ-ಭರಣಿ | ಫೆ. 16 ಸೋಮ-ಚತುರ್ದಶಿ-ಶ್ರವಣ |
| ಜ. 28 ಬುಧ-ದಶಮಿ-ಕೃತ್ತಿಕಾ | ಫೆ. 17 ಮಂಗಳ-ಅಮವಾಸ್ಯೆ-ಧನಿಷ್ಠ |
| ಜ. 29 ಗುರು-ಏಕಾದಶಿ-ರೋಹಿಣಿ | |
| ಜ. 30 ಶುಕ್ರ-ದ್ವಾದಶಿ-ಆರಿದ್ರಾ | |
| ಜ. 31 ಶನಿ-ತ್ರಯೋದಶಿ-ಪುನರ್ವಸು | |
| ಫೆ. 01 ಭಾನು-ಚತುರ್ದಶಿ-ಹುಣ್ಣಿಮೆ | |
| ಫೆ. 02 ಸೋಮ-ಪ್ರತಿಪದ-ಆಶ್ಲೇಷಾ | |

## ಶ್ರೀಕ್ಷೇತ್ರ ಹೊಂಬುಜದಲ್ಲಿ ವಿಶೇಷ ಪೂಜೆ

## "ಶೈಕ್ಷಣಿಕ ಪ್ರಗತಿಯತ್ತ ಯುವ ಪೀಳಿಗೆ, ನಾಗರಿಕರು ರಾಷ್ಟ್ರದ ಏಳಿಗೆಯತ್ತ ಸಾಗಲಿ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಜ. 01) :** ಅತಿಶಯ ಶ್ರೀಕ್ಷೇತ್ರ ಹೊಂಬುಜದ ಪ್ರಾಚೀನ ಭಗವಾನ ಶ್ರೀ 1008 ಪಾರ್ಶ್ವನಾಥ ಸ್ವಾಮಿ ಹಾಗೂ ವಿಶ್ವವಂದ್ಯ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಊರ-ಪರವೂರ ಭಕ್ತಾಭಿಮಾನಿಗಳು ನೂತನ ವರ್ಷ 2026 ಇಷ್ಟಾರ್ಥ ಲಭಿಸುವಂತೆ ಪ್ರಾರ್ಥಿಸಿದರು.

ಹೊಂಬುಜ ಶ್ರೀಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು "ಹೊಸ ವರ್ಷದ ಸ್ವಾಗತ ಮಾಡುವ ಭಕ್ತರು, ಶ್ರೀ ಪಾರ್ಶ್ವನಾಥ ಸ್ವಾಮಿ ಮತ್ತು ಅಧಿದೇವತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಶ್ರೀಮುಖ ದರ್ಶನ ಪುಣ್ಯಲಾಭವನ್ನು ಪಡೆದಿರುವುದು ಜೈನ ಧರ್ಮದ ಪರಂಪರೆಯ ದ್ಯೋತಕವಾಗಿದೆ" ಎನ್ನುತ್ತಾ "ಯುವ ಪೀಳಿಗೆಯ ವಿದ್ಯಾರ್ಥಿವೃಂದದವರು ಸಚ್ಚಾರಿತ್ರ್ಯವಂತರಾಗಿ, ಧರ್ಮಾನುರಾಗಿಗಳಾಗಿ ಶೈಕ್ಷಣಿಕ ಪ್ರಗತಿಯತ್ತ ಯಶಸ್ಸು ಗುರಿ ತಲುಪುವಂತಾಗಲಿ. ನಾಗರಿಕರು, ಸೇವಾಕಾಂಕ್ಷಿ ಸತ್ಪ್ರಜೆಗಳು ಭಾರತದ ಸಂಸ್ಕೃತಿಯನ್ನು ಬೆಳೆಸುತ್ತಾ ರಾಷ್ಟ್ರದ ಏಳಿಗೆಯತ್ತ ಕಾಯಾ-ವಾಚಾ-ಮನಸಾ ಕರ್ತವ್ಯ ನಿಷ್ಠೆಯನ್ನು ಹೊಂದುವುದರಿಂದ ವೈಯುಕ್ತಿಕರಾಗಿ ಸುಖ-ಶಾಂತಿ ನೆಲೆಸುತ್ತದೆ" ಎಂದು ಅನುಗ್ರಹ ಪ್ರವಚನ ನೀಡಿದರು.

ಸಕಲ ಜೀವರಾಶಿಗಳಲ್ಲಿ ಮೈತ್ರಿಭಾವವನ್ನು ತೋರಿ, ಪರಿಸರವನ್ನು ಸಂರಕ್ಷಿಸುವ ಮಹತ್ವವನ್ನು ಮನವರಿಕೆ ಮಾಡಿಕೊಳ್ಳಲು ಸ್ವಸ್ತಿಶ್ರೀಗಳವರು ತಿಳಿಸಿದರು.

ಆಚಾರ್ಯ ಶ್ರೀ 108 ಅನೇಕಾಂತಸಾಗರ ಮಹಾರಾಜರು, ಸಂಘಸ್ಥ ಮುನಿಶ್ರೀಗಳವರು ಭಕ್ತರನ್ನು ಆಶೀರ್ವದಿಸಿದರು. ಶ್ರೀಕ್ಷೇತ್ರದ ಶ್ರೀ ನೇಮಿನಾಥ ಸ್ವಾಮಿ, ಶ್ರೀಮಹಾವೀರ ಸ್ವಾಮಿ, ಶ್ರೀ ಆದಿನಾಥ ಸ್ವಾಮಿ, ಶ್ರೀಕ್ಷೇತ್ರಪಾಲ ಶ್ರೀ ನಾಗಸನ್ನಿಧಿಯಲ್ಲಿ ಹಾಗೂ ತ್ರಿಕೂಟ ಜಿನಾಲಯಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು. ಶ್ರೀಮಠದ ವಸತಿ ಗೃಹಗಳಲ್ಲಿ, ಅಭೀಷ್ಟ ಪ್ರಸಾದ ಭವನದಲ್ಲಿ ಭಕ್ತರಿಗೆ ವ್ಯವಸ್ಥೆ ಕಲ್ಪಿಸಲಾಯಿತು.

### ದಕ್ಷಿಣ ಭಾರತ ಮಟ್ಟದ ಜೈನ ಅರ್ಚಕ ಸಮ್ಮೇಳನ ಉದ್ಘಾಟನೆ

## "ಆಚಾರ್ಯ ಪರಂಪರೆಯಿಂದ ಧರ್ಮ ಜೀವಂತ"

### ಸಂಯಮ, ಶ್ರದ್ಧೆ, ಶಾಸ್ತ್ರಾನುಸರಣೆಯ ಮೇಲೆ ನಿಂತ ಜೈನಧರ್ಮ ಶಾಶ್ವತ



**ಶ್ರವಣಬೆಳಗೊಳ:** **ಜೈನಧರ್ಮ ಇಂದು ಜೀವಂತವಾಗಿ ಉಳಿದಿರುವುದಕ್ಕೆ ತೀರ್ಥಂಕರರ ಉಪದೇಶಗಳಷ್ಟೇ ಕಾರಣವಲ್ಲ. ಆ ಉಪದೇಶಗಳನ್ನು ಸಂರಕ್ಷಿಸಿ, ಸಂಹಿತೆಗೊಳಿಸಿ, ಸಮಾಜದ ಜೀವನೋಪಯೋಗಿಯಾಗಿ ರೂಪಿಸಿದ ಆಚಾರ್ಯ–ಶಾಸ್ತ್ರಿ ಪರಂಪರೆಯ ಕೊಡುಗೆ ಮಹತ್ತರವಾಗಿದೆ** ಎಂದು 5ನೇ ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕ ಸಮ್ಮೇಳನದ ಸರ್ವಾಧ್ಯಕ್ಷ ಡಾ. ಪಾದೂರು ಸುದರ್ಶನ ಕುಮಾರ್ ಇಂದ್ರ ರವರು ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಜ. 6 ಮತ್ತು 7ರಂದು ನಡೆದ ದಕ್ಷಿಣ ಭಾರತ ಮಟ್ಟದ ಜೈನ ಅರ್ಚಕ ಸಮ್ಮೇಳನದಲ್ಲಿ ಮಾತನಾಡಿದರು.

ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಜೈನ ಅರ್ಚಕರು ದಿನನಿತ್ಯ ಪೂಜೆ ಮಾಡುವುದರ ಜೊತೆಗೆ ಸಮಾಜದಲ್ಲಿ ಉತ್ತಮ ಸಂಸ್ಕಾರ ಮತ್ತು ಸನ್ಮಾರ್ಗವನ್ನು ಬೆಳೆಸುವ ಮಹತ್ತರ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಶ್ರವಣಬೆಳಗೊಳ ದಿಗಂಬರ ಜೈನ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ ಹಾಗೂ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ಸಾನಿಧ್ಯ ವಹಿಸಿದ್ದರು. ದಕ್ಷಿಣ ಭಾರತ ಜೈನ ಅರ್ಚಕರ ಸಂಘದ ಅಧ್ಯಕ್ಷ ಎಸ್.ಎಂ. ಸನ್ಮತಿ ಕುಮಾರ್, ಪ್ರಧಾನ ಕಾರ್ಯದರ್ಶಿ ಡಾ. ಹೆಚ್.ಪಿ. ಮೋಹನಕುಮಾರ ಶಾಸ್ತ್ರಿ, ಕಾರ್ಯದರ್ಶಿ ತವನಪ್ಪ ಪಂಡಿತ ಸೇರಿದಂತೆ ಹಲವರು ಉಪಸ್ಥಿತರಿದ್ದರು

WWW.HOMBUJAPADMAVATI.ORG

### ಸಮಾರೋಪ ಸಮಾರಂಭ:

## "ಅರ್ಚಕರು ಸಮಾಜದ ಮಾರ್ಗದರ್ಶಕರು"

–ಪರಮಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಪುರೋಹಿತರು ಸಮಾಜದ ಮಾರ್ಗದರ್ಶಕರು. ಪೂಜೆ–ಅಭಿಷೇಕದ ವೇಳೆ ದ್ರವ್ಯಗಳ ಮೇಲಿನ ಮೋಹ ತ್ಯಜಿಸಿ, ನಿಷ್ಕಾಮ ಭಕ್ತಿಯಿಂದ ಕಾರ್ಯನಿರ್ವಹಿಸಿದಾಗ ಸಮಾಜದ ಅರ್ಚಕರಿಗೆ ಅತ್ಯುನ್ನತ ಗೌರವ ಲಭಿಸುತ್ತದೆ. ಶ್ರಾವಕರು ಅರ್ಚಕರನ್ನು ಸಂಸ್ಕೃತಿಯ ರಕ್ಷಕರೆಂದು ಗೌರವಿಸಬೇಕು** ಎಂದು ಶ್ರವಣಬೆಳಗೊಳ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಮಹಾಸ್ವಾಮೀಜಿಗಳವರು ಅರ್ಚಕರ ಸಮ್ಮೇಳನದ ಸಮಾರೋಪ ಸಮಾರಂಭದ ಅವರು ಪಾವನ ಸಾನಿಧ್ಯ ವಹಿಸಿ ಮಾತನಾಡಿದರು.

ದೇವಾಲಯಗಳ ಪಾವಿತ್ರ್ಯತೆ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಪುರೋಹಿತರು ಸಮಾಜದ ನಿಜವಾದ ಆಸ್ತಿ. ಅವರು ಕೇವಲ ಧಾರ್ಮಿಕ ವಿಧಿಗಳನ್ನು ನಡೆಸುವವರಲ್ಲ. ಬದಲಿಗೆ ಸಮಸ್ತ ಜೀವಿಗಳ ಹಿತ ಬಯಸುವ ಮಾರ್ಗದರ್ಶಕರು ಎಂದರು.

ಸಾಂಗ್ಲಿಯ ದೀಪಕ ಕುಮಾರ್ ಬಾಳೋಸೋ ಉಪಾಧ್ಯೆ, ಮೈಸೂರಿನ ಆಚಾರ್ಯ ಗುರುಕುಲದ ಜ್ಯೋತಿಷ್ಯಾಚಾರ್ಯ ಧರಣೇಂದ್ರ ಮಂಜಯ್ಯ ಇಂದ್ರ, ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಹರ್ಷಾ ನಾಗರಾಜ್ ಮಾತನಾಡಿದರು.

ಅರ್ಚಕ ಸಮ್ಮೇಳನದ ಪ್ರಯುಕ್ತ ಕೂಷ್ಮಾಂಡಿನಿ ಜೈನ ಮಹಿಳಾ ಸಮಾಜದ ಸದಸ್ಯೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

### ಶ್ರೀ ಪಾರ್ಶ್ವನಾಥ ತೀರ್ಥಂಕರ ಜನ್ಮಕಲ್ಯಾಣ ಉತ್ಸವ

## "ಧರ್ಮಪಥದಲ್ಲಿ ಉಪಸರ್ಗ ನಿವಾರಣೆ"

### ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ





ಹೊಂಬುಜ : ಜೈನ ಧರ್ಮದ ಇಪ್ಪತ್ತಮೂರನೇಯ ತೀರ್ಥಂಕರರಾಗಿ ಆರಾಧಿಸುವ ಭಗವಾನ ಶ್ರೀ ಪಾರ್ಶ್ವನಾಥ ತೀರ್ಥಂಕರರ ಜನ್ಮಕಲ್ಯಾಣ ಸುದಿನವನ್ನು ಅತಿಶಯ ಶ್ರೀಕ್ಷೇತ್ರ ಹೊಂಬುಜ ಶ್ರೀ ಪಾರ್ಶ್ವನಾಥ ಸ್ವಾಮಿ ಮಂದಿರದಲ್ಲಿ ಆಚರಿಸಲಾಯಿತು. ಆಚಾರ್ಯ 108 ಶ್ರೀ ಅನೇಕಾಂತಸಾಗರಜೀ ಮುನಿಮಹಾರಾಜರವರು, ಸಂಘಸ್ಥ ಮುನಿವರ್ಯರು ಶ್ರೀ ಪಾರ್ಶ್ವನಾಥ ತೀರ್ಥಂಕರರ ಬಿಂಬವನ್ನು ರಾಜಪಲ್ಲಕ್ಕಿಯಲ್ಲಿ ಶ್ರೀ ಹೊಂಬುಜ ಶ್ರೀಜೈನಮಠದ ಪೀಠಾಧೀಶರಾಗಿರುವ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಮೆರವಣಿಗೆ ನಡೆಸಲಾಯಿತು.

**"ಶ್ರೀ ಪಾರ್ಶ್ವನಾಥ ತೀರ್ಥಂಕರರು ಬೋಧಿಸಿದ ಉಪದೇಶಗಳು ಪ್ರತಿಯೋರ್ವರೂ ಧರ್ಮಪಥದಲ್ಲಿ ಜೀವನ ನಿರ್ವಹಿಸಿದರೆ ಉಪಸರ್ಗಗಳು ನಿವಾರಣೆಯಾಗಿ ಸಂತೃಪ್ತ ಸುಖ–ಶಾಂತಿ ಲಭಿಸುತ್ತದೆ"** ಎಂದು ಸ್ವಸ್ತಿಶ್ರೀಗಳವರು ಪ್ರವಚನದಲ್ಲಿ ಶ್ರೀ ಪಾರ್ಶ್ವನಾಥ ತೀರ್ಥಂಕರರ ಜೀವನ ವೃತ್ತಾಂತವನ್ನು ಸ್ಮರಿಸಿದರು.

ಶ್ರೀ ಪಾರ್ಶ್ವನಾಥ ಸ್ವಾಮಿ ಸ್ತೋತ್ರ, ಜಿನಭಜನೆಯನ್ನು ಭಕ್ತವೃಂದದವರು ಪೂಜಾ ವಿಧಿ–ವಿಧಾನಗಳಲ್ಲಿ ಸ್ತುತಿಸಿದರು. ಪುರೋಹಿತ ಪದ್ಮರಾಜ ಇಂದ್ರರವರು ಆಗಮೋಕ್ತ ವಿಧಿಯಲ್ಲಿ ಪೂಜಾ ವಿಧಾನಗಳನ್ನು ಪೂಜ್ಯ ಮುನಿಶ್ರೀಗಳವರ, ಸ್ವಸ್ತಿಶ್ರೀಗಳವರ ಸಾನಿಧ್ಯದಲ್ಲಿ ನೆರವೇರಿಸಿದರು.

ಹೊಂಬುಜ ಅತಿಶಯ ಶ್ರೀಕ್ಷೇತ್ರದ ಅಧಿದೇವತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯ ವಿಶೇಷ ಪೂಜೆಯನ್ನು ಸಮರ್ಪಿಸಲಾಯಿತು. ಮಕರ ಸಂಕ್ರಾಂತಿಯ ಶುಭ ದಿನವಾಗಿದ್ದು ಭಕ್ತವೃಂದದವರು ತಮ್ಮ ಇಷ್ಟಾರ್ಥ ನೆರವೇರಲು ಪ್ರಾರ್ಥಿಸಿದರು.

### ಪಾದಯಾತ್ರೆ



ಜೈನ್ ಫ್ರೆಂಡ್ಸ್ ಶಿರ್ಲಾಲು ಇದರ ಭಕ್ತಾದಿಗಳ ತಂಡವು ಪಾದಯಾತ್ರೆ ಮುಖಾಂತರ 3 ದಿನಗಳಲ್ಲಿ ಶಿರ್ಲಾಲಿನಿಂದ ಹೊರಟು ಶ್ರೀಕ್ಷೇತ್ರ ಹೊಂಬುಜ ತಲುಪಿರುತ್ತಾರೆ. ದಿನಾಂಕ 22/12/2025ರ ಭಾನುವಾರದಂದು ಸಮಯ 12ರ ಮಧ್ಯಾಹ್ನ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಮಹಾಮಾತೆ ಯಕ್ಷಿ ಶ್ರೀ ಪದ್ಮಾವತಿ ಅಮ್ಮನವರ ದರ್ಶನ ಪಡೆದು ಪೂಜೆ ಸಲ್ಲಿಸಿ ನಂತರ ಪರಮಪೂಜ್ಯ ಸ್ವಾಮೀಜಿಯವರ ಆಶೀರ್ವಾದ ಪಡೆದರು.

### ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ–2026 ಬಿಡುಗಡೆ–ಮಾರಾಟಕ್ಕೆ ಲಭ್ಯ




**ಅತಿಶಯ ಶ್ರೀಕ್ಷೇತ್ರ ಹೊಂಬುಜದಿಂದ ಕನ್ನಡ ಭಾಷೆಯಲ್ಲಿ ಪ್ರಕಟಿಸಲ್ಪಡುವ ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ–2026 ಸ್ವಸ್ತಿಶ್ರೀಗಳವರು ಬಿಡುಗಡೆಗೊಳಿಸಿದರು. ಪ್ರತಿಯೊಂದು ದಿನದ ಧಾರ್ಮಿಕ ಮಹತ್ವವನ್ನು ಆಚರಿಸುವುದು ಪ್ರತಿಯೋರ್ವರ ಧರ್ಮ ಮತ್ತು ಕರ್ತವ್ಯ ಎಂದು ಶುಭ ಹಾರೈಸಿದರು. ಪ್ರಕಟಗೊಂಡಿರುವ "ಶ್ರೀ ಪದ್ಮಾಂಬಾ ಜೈನ ದಿನದರ್ಶಿಕೆ" ಶ್ರೀಕ್ಷೇತ್ರದಲ್ಲಿ ಲಭ್ಯವಿದೆ. ದಿನದರ್ಶಿಕೆಯ ಬೆಲೆ 50/– ಅಂಚೆಯ ಮೂಲಕ ಪಡೆಯಲಿಚ್ಛಿಸುವವರು ಅಂಚೆ ವೆಚ್ಚ ಸೇರಿ ರೂ. 80/–ಶ್ರೀಮಠದ ವಿಳಾಸಕ್ಕೆ ಕಳುಹಿಸಿದಲ್ಲಿ ಅಂಚೆ ಮೂಲಕ ಕಳುಹಿಸಲಾಗುವುದು.**

## ಪರಂಜ್ಯೋತಿ ಆಂಗ್ಲಮಾಧ್ಯಮ ಶಾಲೆಯ ವಾರ್ಷಿಕೋತ್ಸವ

# "ವಿದ್ಯಾಭ್ಯಾಸದಿಂದ ಉತ್ತಮ ಸಂಸ್ಕಾರ ಶತಃಸಿದ್ಧ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಡಿ. 20) :** **"ಪ್ರತಿಯೋರ್ವರು ಸಮರ್ಪಕ ವಿದ್ಯಾಭ್ಯಾಸದತ್ತ ಆದ್ಯತೆ ನೀಡಬೇಕು. ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಕ್ಲಪ್ತ ಸಮಯದಲ್ಲಿ ಪ್ರೋತ್ಸಾಹ ನೀಡುವಂತಾದಾಗ ಮಕ್ಕಳಲ್ಲಿ ಪ್ರತಿಭೆ, ಸಂಯಮ, ಶಿಸ್ತು ಕಾಣಬಹುದು"** ಎಂದು ಹೊಂಬುಜ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ತಿಳಿಸಿದರು. ಅವರು ಶ್ರೀಮಠದ ಟ್ರಸ್ಟ್‌ನ ಅಧೀನದಲ್ಲಿರುವ ಪರಂಜ್ಯೋತಿ ಆಂಗ್ಲಮಾಧ್ಯಮ ಕಿರಿಯ, ಹಿರಿಯ ಹಾಗೂ ಪ್ರೌಢಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಅನುಗ್ರಹ ಪ್ರವಚನ ನೀಡುತ್ತಾ, **"ಉತ್ತಮ ಸಂಸ್ಕಾರಯುತ ಜೀವನ ನಿರ್ವಹಣೆಗೆ ಹಾಗೂ ಸಾಧನೆಯ ಗುರಿ ತಲುಪಲು ಶಿಕ್ಷಣಾಲಯದ ಉಪಾಧ್ಯಾಯರು, ಶಿಕ್ಷಕಿಯರು ನೀಡುವ ಮಾರ್ಗದರ್ಶನ ಅಮೂಲ್ಯವಾದುದು"** ಎಂದರು.

9ನೆಯ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ ವಿವಿಧ ಆಟೋಟ-ಸಾಹಿತ್ಯ-ಪ್ರಬಂಧ, ಸ್ಪರ್ಧಾ ವಿಜೇತರನ್ನು ಹಾಗೂ ಉತ್ತಮ ಅಂಕಗಳಿಸಿದವರನ್ನು ಪುರಸ್ಕರಿಸಿ, ಆಶೀರ್ವದಿಸಿದರು. ವೇದಿಕೆಯಲ್ಲಿ ಶಿಕ್ಷಣ ಇಲಾಖೆಯ ಸಿ.ಆರ್.ಪಿ. ಶ್ರೀ ತೀರ್ಥಪ್ಪ ಹಾಗೂ ಟ್ರಸ್ಟಿ ಶ್ರೀ ರತ್ನಕುಮಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡರು.

ಶಾಲಾ ಆಡಳಿತ ಮಂಡಳಿಯ ಶ್ರೀ ಜಿ. ಮಂಜಪ್ಪರವರು ಶಾಲಾ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳ ಸಾಧನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಪದ್ಮಾವತಿ ಉಪಸ್ಥಿತರಿದ್ದರು. ಶಾಲಾ ಶಿಕ್ಷಕಿಯರು ಕಾರ್ಯಕ್ರಮವನ್ನು ನಿರ್ವಹಿಸಿದರು.



ವಿದ್ಯಾರ್ಥಿಗಳಿಂದ ಮನೋರಂಜನಾ ಕಾರ್ಯಕ್ರಮ ಮುದ ನೀಡಿತ್ತು. ಪೋಷಕರು ಊರ ವಿದ್ಯಾಭಿಮಾನಿಗಳು ಆಗಮಿಸಿದ್ದರು.

## ವಿನಯಾಂಜಲಿ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿಪೂಜೆ

# "ಧರ್ಮಾಚರಣೆಯಿಂದ ಮಾತ್ರವೇ ಸಮಾಜದ ಉನ್ನತೀಕರಣ ಸಾಧ್ಯ"

-ಪ.ಪೂ. ಸ್ವಸ್ತಿಶ್ರೀ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿ



**ಹರ್ಲಾಪುರ:** **ಪ್ರತಿಯೊಬ್ಬ ಮನುಷ್ಯ ತನ್ನ ಜೀವನ ಸುಖಮಯವಾಗಿ ಇರಲು ನೆಮ್ಮದಿಯಿಂದ ಬದುಕಲು ಧಾರ್ಮಿಕ ಆಚರಣೆ ಮಾಡುವುದು ಬಹಳ ಮುಖ್ಯವಾಗಿದೆ. ತನ್ಮೂಲಕ ಧರ್ಮಾಚರಣೆಯಿಂದ ಸಮಾಜದ ಉನ್ನತೀಕರಣವೂ ಸಾಧ್ಯ** ಎಂದು ಸೋಂದಾ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಗಳವರು ಹರ್ಲಾಪುರ ಗ್ರಾಮದಲ್ಲಿ ನಡೆದ ಮುನಿಶ್ರೀ ಸುಧರ್ಮಸಾಗರರ 33ನೇ ಪುಣ್ಯತಿಥಿ ಅಂಗವಾಗಿ ಪೂಜ್ಯರಿಗೆ ವಿನಯಾಂಜಲಿ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿಪೂಜೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಪ್ರವಚನ ನೀಡಿದರು.

ಅಂದು ಭ. ಶ್ರೀ 1008 ಪಾರ್ಶ್ವನಾಥ ತೀರ್ಥಂಕರರಿಗೆ ಮತ್ತು ಭ. 1008 ಆದಿನಾಥ ತೀರ್ಥಂಕರರಿಗೆ ವಿಶೇಷ ಪಂಚಾಮೃತ ಅಭಿಷೇಕ ನಂತರ ಮುನಿಶ್ರೀ ಸುಧರ್ಮಸಾಗರ ಮಹಾರಾಜರ ಪಾದುಕೆಗಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಸಮುದಾಯ ಭವನದ ನಿರ್ಮಾಣಕ್ಕೆ ಭೂಮಿ ಪೂಜೆಯನ್ನು ಶಾಸಕರಾದ ಎಂ.ಆರ್.ಪಾಟೀಲ್ ನೆರವೇರಿಸಿದರು. ಅಧ್ಯಕ್ಷತೆ ಶ್ರೀ ವಿದ್ಯಾಧರ ಪಾಟೀಲ ವಹಿಸಿದ್ದರು. ಶಾಂತಲಾ ಮಹಿಳಾ ಮಂಡಲದವರಿಂದ ಪ್ರಾರ್ಥನೆ, ಶ್ರೀಮತಿ ಗೀತಾ ರೋಹನ್ ಪಾಟೀಲ ಸ್ವಾಗತ, ರೋಹನ್ ಪಾಟೀಲರವರಿಂದ ವಂದನಾರ್ಪಣೆ ಜರುಗಿತು. ಪ್ರವೀಣ ಸಿದ್ದಣ್ಣವರ ಕಾರ್ಯಕ್ರಮ ನಿರೂಪಿಸಿದರು.

## ರಾಜ್ಯಮಟ್ಟದ ಜೈನ ಪರಂಪರೆಯ ಉಪನಯನ ವಿಧಿ ಮತ್ತು ವ್ರತಸಂಸ್ಕಾರ ಸ್ವೀಕಾರ ಕಾರ್ಯಕ್ರಮ

ಬೆಂಗಳೂರು: ಮಹಾನಗರದ ದಿಗಂಬರ ಜಿನಮಂದಿರಗಳ ಪುರೋಹಿತರುಗಳನ್ನು ಒಳಗೊಂಡ ಶ್ರೀ ಜೈನಾಗಮ ಪ್ರತಿಷ್ಠಾನ (ರಿ.) ದ ವತಿಯಿಂದ ದಿನಾಂಕ **01-03-2026**ರ ಭಾನುವಾರದಂದು ಬೆಂಗಳೂರಿನ ಡಾ॥ ಡಿ. ವೀರೇಂದ್ರ ಹೆಗ್ಗಡೆ ಸಭಾಭವನ, ಕರ್ನಾಟಕ ಜೈನ ಭವನದಲ್ಲಿ ಪೂಜ್ಯ ಭಟ್ಟಾರಕರ ಉಪಸ್ಥಿತಿಯಲ್ಲಿ 8 ವರ್ಷಕ್ಕೂ ಮೇಲ್ಪಟ್ಟ ಬಾಲಕ ಮತ್ತು ಬಾಲಕಿಯರಿಗೆ ರಾಜ್ಯ ಮಟ್ಟದ ಜೈನ ಪರಂಪರೆಯ ಉಪನಯನ ಹಾಗೂ ವ್ರತಸಂಸ್ಕಾರ ಸ್ವೀಕಾರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ನಾಡಿನ ಜೈನಮಠದ ಪರಮಪೂಜ್ಯ ಭಟ್ಟಾರಕರುಗಳ ಪಾವನ ಸಾನಿಧ್ಯದಲ್ಲಿ ಈ ಮಂಗಲ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಧರ್ಮ ಬಂಧುಗಳು ಇದರ ಪುಣ್ಯ ಲಾಭವನ್ನು ಪಡೆಯಬೇಕಾಗಿ ಕೋರಲಾಗಿದೆ. ವಟುಗಳು ನಿಗದಿತ ಅರ್ಜಿ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ನೀಡಬೇಕೆಂದು ವಿನಂತಿ. ಇದಕ್ಕೆ ಬೇಕಾದ ಅರ್ಜಿ ಫಾರಂಗಳು ಬೆಂಗಳೂರಿನ ಜಿನಮಂದಿರದ ಪುರೋಹಿತರುಗಳ ಬಳಿ ದೊರೆಯುತ್ತದೆ. ವಟುಗಳಿಗೆ ಬೇಕಾದ ಎಲ್ಲಾ ಪೂಜಾಸಾಮಾಗ್ರಿಯನ್ನು ಹಾಗೂ ವಸ್ತ್ರಗಳನ್ನು ಸಮಿತಿಯ ವತಿಯಿಂದ ನೀಡಲಾಗುವುದು. ಪೂಜಾ ಕಾರ್ಯಕ್ಕೆ ಬೇಕಾದ ಪರಿಕರಗಳನ್ನು ವಟುಗಳೇ ತರಬೇಕು. ಹೊರ ಊರಿನಿಂದ ಬಂದವರಿಗೆ ವಸತಿ ವ್ಯವಸ್ಥೆ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ ಮೊ: **94492 13258, 86184 26224** ಸಂಪರ್ಕಿಸಿ.

WWW.HOMBUJAPADMAVATI.ORG

## ವರಾಂಗ : ವಾರ್ಷಿಕ ಜಾತ್ರೋತ್ಸವ



ಧರ್ಮಬಂಧುಗಳೇ,

ಶ್ರೀಕ್ಷೇತ್ರ ಹೊಂಬುಜ ಮಹಾಸಂಸ್ಥಾನದ ಶಾಖಾ ಕ್ಷೇತ್ರವಾಗಿರುವ ವರಾಂಗ ಶ್ರೀಕ್ಷೇತ್ರದಲ್ಲಿ ವಾರ್ಷಿಕ ಜಾತ್ರೋತ್ಸವವು ಪ್ರತಿವರ್ಷದಂತೆ ಫೆ. 03, 2026ನೇ ಮಂಗಳವಾರದಿಂದ ಫೆ. 07, 2026ನೇ ಶನಿವಾರದವರೆಗೆ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರ ದಿವ್ಯಸಾನಿಧ್ಯ, ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ನೆರವೇರಲಿದೆ.

ಈ ನಿಮಿತ್ತ ಬಸದಿಗಳಲ್ಲಿ ವಿಶೇಷ ಪೂಜೆ ಹಾಗೂ ಶ್ರೀನೇಮಿನಾಥ ಸ್ವಾಮಿ ಮತ್ತು ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರ ಭವ್ಯ ರಥೋತ್ಸವವು ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ನಡೆಯಲಿವೆ. ಫೆ-03 ಮಂಗಳವಾರ-ನಿತ್ಯವಿಧಿ, ಇಂದ್ರಪ್ರತಿಷ್ಠೆ, ಧ್ವಜಾರೋಹಣ, ಫೆ-04 ಬುಧವಾರ ನಿತ್ಯವಿಧಿ, ವಾಸ್ತುಶಾಂತಿ, ಶ್ರೀಬಲಿ ಉತ್ಸವ, ಫೆ-05 ಗುರುವಾರ ನವಗ್ರಹಶಾಂತಿ, ಪುಷ್ಪರಥೋತ್ಸವ, ಫೆ-06 ಶುಕ್ರವಾರ ಮಹಾರಥೋತ್ಸವ, ಫೆ.-07 ಶನಿವಾರದಂದು ಶ್ರೀಕ್ಷೇತ್ರಪಾಲ ಪೂಜೆ, ಕುಂಕುಮೋತ್ಸವ, ಧ್ವಜಾವರೋಹಣ, ಸಂಜೆ ಕ್ಷೇತ್ರಪಾಲ ಪೂಜಾ ಕಾರ್ಯಕ್ರಮಗಳು ನೆರವೇರಲಿವೆ. ಶ್ರೀಕ್ಷೇತ್ರದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹಾಗೂ ವಾರ್ಷಿಕ ರಥಯಾತ್ರಾ ಮಹೋತ್ಸವದಲ್ಲಿ ಧರ್ಮಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುಣ್ಯಭಾಗಿಗಳಾಗಬೇಕಾಗಿ ಅಪೇಕ್ಷೆ.

ವ್ಯವಸ್ಥಾಪಕರು, ವರಂಗ ಶ್ರೀಮಠ,
ಶ್ರೀಹೊಂಬುಜ ಜೈನಮಠ,
ಮೋ : 74117 48766

ವ್ಯವಸ್ಥಾಪಕರು,
ಫೋ : 9481453653,
9483801460

## ಬೃಹತ್ ಸಿದ್ಧಚಕ್ರ ಮಹಾಮಂಡಲ ವಿಧಾನ



ಹಾವೇರಿ: ಜೈನ ಸಮುದಾಯದ ಶ್ರಾವಕಿಯರು ಪ್ರತಿದಿನ ಜಿನದರ್ಶನ ಪಾಲಿಸುವುದರ ಜತೆಗೆ ಕುಲಾಚಾರ ಕುರಿತು ಮಕ್ಕಳಿಗೆ ಕಲಿಸಿ ಕೊಡಬೇಕು. ಲೌಕಿಕ ಶಿಕ್ಷಣ, ಸಂಸ್ಕಾರ ಕೊಡಿಸುವುದರ ಮುಖಾಂತರ ಸಮಾಜದ ಪರಿವರ್ತನೆಗೆ ಮಹತ್ವ ನೀಡಬೇಕು ಎಂದು ಚರ್ಯಾಶಿರೋಮಣಿ ಮುನಿಶ್ರೀ 108 ವಿದಿತ ಸಾಗರ ಮಹಾರಾಜರು ನಗರದ ರಜನಿ ಸಭಾಂಗಣದಲ್ಲಿ ಬೃಹತ್ ಸಿದ್ಧಚಕ್ರ ಮಹಾಮಂಡಲ ವಿಧಾನ ಮಹೋತ್ಸವದ ಆರನೇ ದಿನದಂದು ಸಾನಿಧ್ಯ ವಹಿಸಿ ಮಾತನಾಡಿದರು.

ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಸಾನಿಧ್ಯ ವಹಿಸಿ ಮಾತನಾಡಿ, ಬೃಹತ್ ಸಿದ್ಧಚಕ್ರದಲ್ಲಿ ಜೈನ ಧರ್ಮದ ಆಗಮ ಪರಿಚಯವಾಗುತ್ತದೆ. ಸಮಾಜ ಉಳಿದರೆ ಧರ್ಮವೂ ಉಳಿಯುತ್ತದೆ. ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಕೊಡಬೇಕು. ಆಚಾರ-ವಿಚಾರ, ನಡೆ-ನುಡಿಯಲ್ಲಿ ಅಹಿಂಸೆ ಪಾಲನೆ ಮಾಡುವುದನ್ನು ಕಲಿಸಬೇಕು. ಅದೇ ನಿಜವಾದ ಜೈನ ಧರ್ಮ ಎಂದರು.

ಗುರುದೇವ GURUDEVA MONTHLY
RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
Licensed to post without prepayment Licence No: SK/WPP/226/2024-26
ವಾರ್ಷಿಕ ಚಂದಾ : ರೂಪಾಯ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯ 1000-00 ಮಾತ್ರ
ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722